**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.123/2018 C/W ಎಸ್.ಸಿ.ನಂ.102/2019**

**(ಚಾ.ಸಾ.14/ಪ್ರಾ.ಸಾ.14)**

ತಾಃ 05.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ನವಾಜ್ ಪಾಶಾ |
| ತಂದೆಯ ಹೆಸರು | ಕಿಜರ್ ಪಾಶಾ |
| ವಯಸ್ಸು | 38 ವರ್ಷ |
| ಉದ್ಯೋಗ | ಗುಜರಿ ವ್ಯಾಪಾರ |
| ವಾಸ ಸ್ಥಳ | ಶಿವಾಜಿನಗರ, ಬೆಂಗಳೂರು |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿದಾರರು 3 ಮಹಜರ್ ನಲ್ಲಿ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ತನಿಖಾಧಿಕಾರಿಗಳು ದೋಷಾರೋಪಣೆ ಪತ್ರದಲ್ಲಿ ಸಾಕ್ಷಿದಾರರ ಸಹಿಯನ್ನು ನಯಾಜ್ ಪಾಶಾ ಬಿನ್ ಕಿಸನ್ ಪಾಶಾ ಎಂದು ತೋರಿಸಿದ್ದು ಸಾಕ್ಷಿದಾರರು ನ್ಯಾಯಾಲಯದಲ್ಲಿ ತನ್ನ ಹೆಸರನ್ನು ನವಾಜ್ ಪಾಶಾ ಬಿನ್ ಕಿಜರ್ ಪಾಶಾ ಎಂದು ನುಡಿದಿದ್ದು ಆದರೆ ಮಹಜರ್ ನಲ್ಲಿ ಇರುವ ಸಹಿಗಳನ್ನು ಗುರುತಿಸಿದ ಕಾರಣ ಸಾಕ್ಷಿದಾರರ ಸಾಕ್ಷ್ಯವನ್ನು ಮಾಡಿಸಲು ಅನುಮತಿ ನೀಡಲಾಯಿತು.

2. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ 4ನೇ ಆರೋಪಿ ಹಾಗೂ ಪ್ರತ್ಯೇಕಿಸಲ್ಪಟ್ಟ ಎಸ್.ಸಿ.ನಂಬರ್ 102/2019 ಕೇಸಿನ 6ನೇ ಆರೋಪಿಯನ್ನು ನೋಡಿ ಅವರ ಪರಿಚಯ ಇಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಪ್ರತೇಕಿಸಲ್ಪಟ್ಟ 5ನೇ ಆರೋಪಿಯನ್ನು ನೋಡಿದಲ್ಲಿ ನನಗೆ ಗುರುತಿಸಲು ಆಗುವುದಿಲ್ಲ. 2017 ನೇ ಸಾಲಿನಲ್ಲಿ ಹರಾಜು ಇದ್ದ ಕಾರಣ ನಾನು ಹಾಗೂ ಚಾಸಾ.13 ರವರು ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಗೆ ಹೋಗಿದ್ದೇವು. ನಾವು ಹರಾಜಿನಲ್ಲಿ ಭಾಗವಹಿಸಿ ಹಣವನ್ನು ಕಟ್ಟಿದ್ದು ನಂತರ ಪೊಲೀಸರು ಹಣ ಕಟ್ಟಿದ ಬಗ್ಗೆ ಸಹಿ ಮಾಡುವಂತೆ ಹೇಳಿ ನಮ್ಮ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿದಾರರು 3 ಅಮಾನತ್ತು ಪಂಚನಾಮೆಯಲ್ಲಿ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.20 ರಿಂದ 22, ಸಾಕ್ಷಿದಾರರ ಸಹಿಯನ್ನು ನಿ.ಪಿ.20(ಎ) ಯಿಂದ ನಿ.ಪಿ.22(ಎ) ಎಂದು ಗುರುತಿಸಲಾಯಿತು. ಪೊಲೀಸರು ಆ ಸಮಯದಲ್ಲಿ ನಮ್ಮ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ನಮ್ಮ ಸಹಿಯನ್ನು ಪಡೆದಿಲ್ಲ. ಅದೇ ರೀತಿ ನಮ್ಮ ಸಮಕ್ಷಮ ಆರೋಪಿತರ ವಶದಿಂದ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ.

3. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮು.ಮಾ.1 ರ ಮೇಲೆ ಅಂಟಿಸಿದ ಚೀಟಿಯಲ್ಲಿ ಹಾಗೂ ಉಳಿದ 3 ಬಟ್ಟೆ ಕವರ್ ಗಳ ಮೇಲೆ ಅಂಟಿಸಿದ ಚೀಟಿಗಳಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ಸದರಿ ಬಟ್ಟೆ ಕವರ್ ಗಳ ಮೇಲೆ

ಅಂಟಿಸಿದ ಚೀಟಿಗಳ ಮೇಲೆ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಗುರುತಿಸುವ ಸಲುವಾಗಿ ಮು.ಮಾ.3 ರಿಂದ 5, ಸಾಕ್ಷಿದಾರರ ಸಹಿಯನ್ನು ಮು.ಮಾ.3(ಎ) ಯಿಂದ ಮು.ಮಾ.5(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೊಲೀಸರು ಸಹಿ ಮಾಡಲು ಹೇಳಿದ ಕಾರಣ ಅವುಗಳ ಮೇಲೆ ಸಹಿ ಮಾಡಿರುತ್ತೇನೆ. ನಿ.ಪಿ.20 ರಿಂದ 22 ರ ಮಹಜರ್ ನಲ್ಲಿ ಬರೆದ ವಿಚಾರಗಳು ನನಗೆ ತಿಳಿದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

4. ದಿಃ16.01.2017 ರಂದು ಪೊಲೀಸರು ನಮ್ಮನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿಯು ಠಾಣೆಯಲ್ಲಿ ಹರಾಜು ಇದ್ದ ಕಾರಣ ನಾವೇ ಹೋಗಿದ್ದೇವು ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಠಾಣೆಯಲ್ಲಿ 4ನೇ ಆರೋಪಿ ಸುರೇಶ್ ಅಲಿಯಾಸ್ ಬಿಕ್ಲಾ, ಪ್ರತ್ಯೇಕಿಸಲ್ಪಟ್ಟ 5ನೇ ಆರೋಪಿ ತಿಮ್ಮರಾಜು ಹಾಗೂ ಎಸ್ ಸಿ ನಂಬರ್ 102/2019 ರ ಕೇಸಿನ ಆರೋಪಿ ಸಲಾಮತ್ ಎಂಬುವವರು ಇದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು

ಚಾಸಾ.1 ಲಿಂಗರಾಜು ಇವರಿಗೆ ಹೆದರಿಸಿ, ಚಾಕು ತೋರಿಸಿ ಅವರಿಂದ ಹಣ, ಡಿ ಎಲ್, ಎಟಿಎಮ್ ಕಾರ್ಡ್, ಬೆಳ್ಳಿ ಕಡಗ ಹಾಗೂ ಲಾರಿಯನ್ನು ದೋಚಿಕೊಂಡು ಹೋಗಿದ್ದರು ಎಂದರೆ ನನಗೆ ತಿಳಿದಿಲ್ಲ. ಆರೋಪಿತರು ಕೃತ್ಯ ಮಾಡಲು ಫೋನ್ ಉಪಯೋಗಿಸಿರುವುದಾಗಿ ಹೇಳಿ ಅವುಗಳನ್ನು ಠಾಣೆಯಲ್ಲಿ ಪೊಲೀಸರ ಮುಂದೆ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ.

5. ಪೊಲೀಸ್ ಠಾಣೆಯಲ್ಲಿ 4ನೇ ಆರೋಪಿ ಒಂದು ಸ್ಯಾಮ್‌ಸಂಗ್ ಮೊಬೈಲ್ ಫೋನ್ ಹಾಜರುಪಡಿಸಿದ್ದು ಅದನ್ನು ಪೊಲೀಸರು ನಮ್ಮ ಸಮಕ್ಷಮ ಠಾಣೆಯಲ್ಲಿ ರಾತ್ರಿ 8.30 ರಿಂದ 9.00 ಗಂಟೆ ಸಮಯದಲ್ಲಿ ನಿ.ಪಿ.20 ಮಹಜರ್ ಮೂಲಕ ವಶಪಡಿಸಿರುತ್ತಾರೆ ಎಂದರೆ ಸರಿಯಲ್ಲ.

6. ಅದೇ ರೀತಿ ಪ್ರತ್ಯೇಕಿಸಲ್ಪಟ್ಟ 5ನೇ ಆರೋಪಿ ತಿಮ್ಮರಾಜು ಇವರು ಕಪ್ಪು ಸ್ಯಾಮ್ ಸಂಗ್ ಕಂಪನಿಯ ಮೊಬೈಲ್ ಹಾಗೂ ಕಪ್ಪು, ಕೆಂಪು ಬಣ್ಣದ ಕಾರ್ಬನ್ ಕಪನಿಯ ಮೊಬೈಲ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಮ್ಮ ಸಮಕ್ಷಮ ಠಾಣೆಯಲ್ಲಿ ರಾತ್ರಿ 9.05 ರಿಂದ 9.45 ರ ಸಮಯದಲ್ಲಿ ನಿ.ಪಿ.21 ರ ಮೂಲಕ ಅಮಾನತ್ತುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

7. ಎಸ್ ಸಿ ನಂಬರ್ 102/2019 ಕೇಸಿನ ಆರೋಪಿ ಸಲಾಮತ್ ಇವರು ಠಾಣೆಯಲ್ಲಿ ಒಂದು ಕಪ್ಪು ಬಣ್ಣದ ಚಿಕ್ಕ ಮೊಬೈಲ್ ಅನ್ನು ಹಾಜರುಪಡಿಸಿದ್ದು ಅದನ್ನು

ಪೊಲೀಸರು ರಾತ್ರಿ 9.45 ರಿಂದ 10.15 ರ ಸಮಯದಲ್ಲಿ ನಿ.ಪಿ.22 ರ ಮೂಲಕ ನಮ್ಮ ಸಮಕ್ಷಮ ಜಪ್ತಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.20 ರಿಂದ 22 ರ ಮಹಜರ್ ಗಳ ವಿಚಾರಗಳನ್ನು ನನಗೆ ಓದಿ ತಿಳಿಸಿದ ನಂತರ ಅವುಗಳಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಹೇಳಿಕೆಯ ವಿಚಾರವನ್ನು ಓದಿ ತಿಳಿಸಿದ್ದು ಅದರಂತೆ ತಾನು ಹೇಳಿಕೆ ನೀಡಿಲ್ಲ ಎಂದು ಉತ್ತರಿಸಿದ್ದು, ಸದರಿ ಹೇಳಿಕೆಯನ್ನು ನಿ.ಪಿ.23 ಎಂದು ಗುರುತಿಸಲಾಯಿತು. ನಾನು ನಿ.ಪಿ.23 ರಂತೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>

8. 1 ನೇ ಆರೋಪಿ ಪರ ವಕೀಲರಾದ ಶ್ರೀ ಎನ್ ಆರ್ ಆರ್ ಪರವಾಗಿ ಶ್ರೀ ಟಿ ಎ ವಕೀಲರು, 2, 4 ನೇ ಆರೋಪಿತರ ಪರ ಶ್ರೀ ಬಿ ಎಮ್ ಡಿ ವಕೀಲರು, 3 ನೇ ಆರೋಪಿ ಪರ ಶ್ರೀ ಬಿವಿಸಿ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

9. ಎಸ್ ಸಿ ನಂಬರ್ 102/2019 ರ ಪ್ರಕರಣದ 6 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು 6 ನೇ ಆರೋಪಿ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲವಾಗಿ 6 ನೇ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.